(ಇಂದು ದಿನಾಂಕ 05.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ನಾನು ವ್ಯವಸಾಯ ಮಾಡುತ್ತೇನೆ. ನಾನು ಹಾಲಿ ಗ್ರಾಮ ಪಂಚಾಯಿತಿ ಸದಸ್ಯ. ನಾನು ದಿನಾಂಕ 30.06.1965 ರಲ್ಲಿ ಜನಿಸಿರುತ್ತೇನೆ. ದಾವಾ ಆಸ್ತಿಯನ್ನು ಖರೀದಿಸಿದಾಗ ನನಗೆ 13, 14 ವರ್ಷ ವಯಸ್ಸು ಆಗಿರಬಹುದು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ 4 ನೇ ಪ್ರತಿವಾದಿ ಪ್ರತಿವಾದಿ 1 ರಿಂದ 3 ರವರ ಜೊತೆ ಸೇರಿ ನಮ್ಮ ಜಮೀನಿನಲ್ಲಿ ಕೂಲಿ ಮಾಡುತ್ತಿರಲಿಲ್ಲ ಕಾರಣ 4 ನೇ ಪ್ರತಿವಾದಿ ಆ ಸಮಯದಲ್ಲಿ ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯ ಜೊತೆ ಸೇರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ನಾನೇ ವಾದಿಗೆ ಕೊಡಿಸಿ ಅವರ ಜೊತೆ ಸೇರಿ ಈ ಸುಳ್ಳು ದಾವೆ ಹೂಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.

(ಇಂದು ದಿನಾಂಕ 05.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ನನಗೆ ನಾನು ಹುಟ್ಟಿದ ದಿನಾಂಕ ಗೊತ್ತಿಲ್ಲ. ನನಗೆ 65 ವರ್ಷ ವಯಸ್ಸು ಆಗಿರಬಹುದು. ನನ್ನ ತಂದೆ ಮೃತಪಟ್ಟಾಗ ನನಗೆ 12 – 13 ವರ್ಷ ವಯಸ್ಸಾಗಿತ್ತು. ನನ್ನ ತಂದೆಗೆ 4 ಜನ ಮಕ್ಕಳು. ನನ್ನ ಸಹೋದರಿಯರಿಗೆ ಯಾವಾಗ ಮದುವೆ ಆಯಿತು ನನಗೆ ಗೊತ್ತಿಲ್ಲ. ನಾನು ಹಾಗೂ ಪ್ರತಿವಾದಿ 1 ರಿಂದ 4 ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಾಯಿ ದಾವಾ ಆಸ್ತಿಯನ್ನು ಖರೀದಿಸಿದ ಖರೀದಿ ಪತ್ರಕ್ಕೆ ನಾನು ಪಕ್ಷಗಾರನಲ್ಲ.

2. ನಾನು ಕಾಳನಾಯಕನಹಳ್ಳಿ ವಾಸವಾಗಿದ್ದೇನೆ. ಈಗ ನಾನು ವಾಸವಾಗಿರುವ ಮನೆ ಈಗ ನನ್ನ ತಾಯಿಯ ಹೆಸರಿನಲ್ಲಿ ಇದೆ. ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಿಪಿ 1 ಕ್ಕೆ ಪಿಡಬ್ಲ್ಯೂ 2 ರವರು ಸಾಕ್ಷಿ ಆಗಿದ್ದಾರೆ. ನನ್ನ ತಾಯಿಯನ್ನು 2008 ರಲ್ಲಿ ಭಾಗ ಕೇಳಿದೆ ಎನ್ನುತ್ತಾರೆ. ನಾನು ಭಾಗ ಕೇಳುವ ಮುಂಚೆಯೇ ದಾಖಲೆಯನ್ನು ಪಡೆದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಯನ್ನು ಪಿಡಬ್ಲ್ಯೂ 2 ರವರು ಅವರ ಹೆಸರಿನಲ್ಲಿ ತೆಗೆದುಕೊಂಡು ಬಂದಿದ್ದಾರೆ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಪಿಡಬ್ಲ್ಯೂ 2 ರವರ ಜೊತೆ ಸೇರಿ 5 ಹಾಗೂ 6 ನೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಾಯಿ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ನಾನು ಹುಟ್ಟುವ ಪೂರ್ವದಲ್ಲೇ ಖರೀದಿಸಿದ್ದರು ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.